ಒಂದಾಣೆ ಮಾಲೆ 196

ನರವೀರ ನೃಪತುಂಗ

(ಐತಿಹಾಸಿಕ ನಾಟಕ)

*

ರಚಯಿತರು:

ಉಡುಪಿ ಶ್ರೀನಿವಾಸರಾವ್.

*

1958

ಬೆಲೆ: ಒಂದಾಣೆ.

ಒಂದಾಣೆ ಮಾಲೆ, ಮಂಗಳೂರು.

ನರವೀರ ನೃಪತುಂಗ

(ಐತಿಹಾಸಿಕ ನಾಟಕ)

ಪಾತ್ರವರ್ಗ: ನೃಪತುಂಗ, ಕೃಷ್ಣಕುಮಾರ, ಗುಣಭದ್ರಾಚಾರ್ಯ, ಬಂಕರಸ, ಬಾಲಾದಿತ್ಯ, ಗಣಪತಿ, ಮಮತಾ, ಜಯಂತಿ (ಕೆಲವು ಸೈನಿಕರು, ಚಾರರು).

ದೃಶ್ಯ ೧

(ನೃಪತುಂಗನ ಆಸ್ಥಾನ. ಗುಣಭದ್ರಾಚಾರ್ಯರೂ ಕುಳಿತಿರುವರು.)

ನೃಪತುಂಗ: ಸ್ವಾಮಿ, ವಿರೂಪಾಕ್ಷ, ಹಾಲೆಂದು ಸೇವಿಸಿದುದೇ ವಿಷವಾಗಿ ಕರುಳು ಕತ್ತರಿಸಬೇಕೆ? ಇದೇನು, ನನ್ನ ಸಹನೆಯ ಪರೀಕ್ಷೆಯೇ? ಬಹು ದಿನಗಳಿಂದ ಮಕ್ಕಳಿಲ್ಲವೆಂದು ಹಂಬಲಿಸಿ, ಕೊನೆಗೆ ನಿನ್ನ ಕೃಪೆಯಿಂದ ಜನಿಸಿದ ಮಗನೇ ನನ್ನೆದುರು ಕತ್ತಿ ಹಿಡಿದು ನಿಂತನೇ? ದೇವ, ಒಂದೆಡೆ ಮಗನ ಮೇಲಿನ ವಾತ್ಸಲ್ಯ, ಇನ್ನೊಂದೆಡೆ ರಾಷ್ಟ್ರಪ್ರೇಮ, ಇವುಗಳ ಮಧ್ಯೆ ನಿಲ್ಲಿಸಿ ಪರೀಕ್ಷಿಸುತ್ತಿರುವಿಯಾ? ಕರ್ನಾಟಕ ಸಾಮ್ರಾಜ್ಯ ಲಕ್ಷ್ಮಿಯು ನನ್ನ ಕೈಬಿಟ್ಟು ಹೋಗುತ್ತಿರುವುದನ್ನು ಕಲ್ಲಾಗಿ ಕುಳಿತು ನೋಡುತ್ತಿರುವೆಯಾ? ನನ್ನ ನಾಡಿನಲ್ಲಿ ತುಂಬಿ ಹರಿಯುತ್ತಿರುವ ಹಾಲ್ಜೇನಿನ ಹೊಳೆಯನ್ನು ಬತ್ತಿಸಿ, ರಕ್ತದ ಕಾಲುವೆ ಹರಿಯಿಸುವೆಯಾ?

ಗುಣಭದ್ರಾಚಾರ್ಯ: ನೃಪತುಂಗ, ಆಳುವ ಅರಸನೇ ಅಧೈರ್ಯ ಪಟ್ಟರೆ, ಹೆತ್ತ ತಾಯಿಯೇ ತನ್ನ ಮುದ್ದು ಮಗುವನ್ನು ಮರೆತರೆ, ಬಡಜನರ ಪಾಡೇನು? ಕರ್ನಾಟಕ ಮಾತೆಯು ಇಂದು ಬೇಟೆಗಾರರ ಮಧ್ಯೆ ಸಿಕ್ಕಿ ಬಿದ್ದ ಬಡ ಮಿಗದಂತೆ ಆಗಿರುವಳು. ಆಕೆಯನ್ನು ರಕ್ಷಿಸುವ ಜವಾಬ್ದಾರಿ ನಿನ್ನದು.

ನೃಪತುಂಗ: ಗುರುದೇವ, ಒಂದೆಡೆ ಕರ್ತವ್ಯದ ಕರೆ—ಇನ್ನೊಂದೆಡೆ ಪುತ್ರವಾತ್ಸಲ್ಯ—ಇವುಗಳ ಮಧ್ಯೆ ಸಿಕ್ಕಿ ತೊಳಲುತ್ತಿದ್ದೇನೆ. ಈ ಬಿಕ್ಕಟ್ಟಿನಿಂದ ಪಾರಾಗಲು ಯೋಗ್ಯ ದಾರಿಯನ್ನು ನೀವೇ ತೋರಿಸಬೇಕು.

ಗುಣ: ರಾಜ್ಯಸೂತ್ರವನ್ನು ಕೈಯಲ್ಲಿ ಹಿಡಿದುಕೊಂಡಿರುವ ನಿನ್ನಲ್ಲಿ ಯಾವ ಸಂಸಾರವ್ಯಾಮೋಹವೂ ಇರಬಾರದು.

ನೃಪತುಂಗ: ದೇವ, ಸ್ವರ್ಗಸ್ಥಳಾಗಿರುವ ನನ್ನ ರಾಣಿ ಲಕ್ಷ್ಮಿಗೆ, ಕುಮಾರ ಕೃಷ್ಣನನ್ನು ನನ್ನ ಪ್ರಾಣಕ್ಕಿಂತಲೂ ಮಿಗಿಲಾಗಿ ಸಲಹುವೆನೆಂದು ವಚನಕೊಟ್ಟಿದ್ದೇನೆ. ಇಂದು ಮಗನನ್ನೇ ಶಿಕ್ಷೆಗೊಳಪಡಿಸಿದರೆ, ವಚನ ಭಂಗದ ಘೋರ ಅಪರಾಧವಾಗದೇ?

ಗುಣ: (ಸಿಟ್ಟಿನಿಂದ) ರಾಜ, ಪುತ್ರವಾತ್ಸಲ್ಯದಿಂದ ಅಂಧನಾಗಿರುವ ನಿನ್ನಲ್ಲಿ ಇನ್ನೇನೂ ಹೇಳಬಯಸುವುದಿಲ್ಲ. ಆದರೆ, ಜ್ಞಾಪಕವಿಡು, ನೀನು ಮಗನ ಮೇಲಿನ ಮಮತೆಯಿಂದ ಕರ್ನಾಟಕ ಮಾತೆಗೆ ದ್ರೋಹ ಬಗೆಯುತ್ತಿರುವಿ. ಕನ್ನಡ ಭೂಮಿಯ ಉನ್ನತಿಗಾಗಿ ಹೋರಾಡುವ ಆ ನಾಲ್ಕು ಕೋಟಿ ಕರ್ಮಯೋಗಿಗಳ ಸಮಾಧಿಯ ಮೇಲೆ ನಿನ್ನ ಸ್ವಾರ್ಥದ ಗೋರಿ ಕಟ್ಟುತ್ತಿರುವಿ. ಇಂತಹ ದ್ರೋಹವನ್ನು ಕನ್ನಡಿಗರ ಕುಲದೇವನಾದ ವಿರೂಪಾಕ್ಷನು ಎಂದಿಗೂ ಸಹಿಸನು. (ತಿರಸ್ಕಾರದಲ್ಲಿ ರಾಜನನ್ನೊಮ್ಮೆ ನೋಡಿ ತೆರಳುವರು.)

ನೃಪತುಂಗ: (ದುಃಖ ಉಮ್ಮಳಿಸಿ ಬಂದು) ಗುರುದೇವ.... ಗುರುದೇವ.... ಧಗಿಲೇಳುತ್ತಿರುವ ಅಗ್ನಿಗೆ ಆಜ್ಯವಿಕ್ಕಿ ಹೋದಿರಾ? (ತುಸು ಆಲೋಚಿಸಿ) ಹೌದು.... ಮಗನ ಮೇಲಿನ ಪ್ರೇಮದಿಂದ, ನಾನು ಕರ್ನಾಟಕ ಮಾತೆಗೆ ದ್ರೋಹ ಬಗೆಯುತ್ತಿದ್ದೇನೆ? ದೇಶಕ್ಕಾಗಿ ದೇಹವನ್ನೇ ಧಾರೆಯೆರೆದು ಕೊಡಬಲ್ಲ ನನ್ನ ಜನತೆಗೆ ವಂಚನೆ ಮಾಡುತ್ತಿದ್ದೇನೆ? ಇಲ್ಲ.... ಇಲ್ಲ, ಇನ್ನು ನನ್ನಲ್ಲಿ ಮಗನೆಂಬ ಅಭಿಮಾನವಿಲ್ಲ. ಇನ್ನು ಯುವರಾಜ ಕೃಷ್ಣನು ನನ್ನ ಮಗನಲ್ಲ. ದೇಶದ್ರೋಹಿ, ದೈವದ್ರೋಹಿ! ಕ್ಷಣಮಾತ್ರದಲ್ಲಿ ಮಗನ ರಕ್ತದಿಂದ ಕರ್ನಾಟಕ ದೇವಿಯ ಪಾದವನ್ನು ತೊಳೆಯದಿದ್ದಲ್ಲಿ ನಾನು ನೃಪತುಂಗನಲ್ಲ. ಜೈ ವಿರೂಪಾಕ್ಷ!

(ತೆರಳುವನು.)

ದೃಶ್ಯ ೧

(ರಾಜಬೀದಿ. ಗಣಪತಿಯ ಪ್ರೇಯಸಿಯಾದ ಜಯಂತಿಯು ಪ್ರವೇಶಿಸುವಳು.)

ಜಯಂತಿ: ಅಬ್ಬಾ! ಈ ರಾಜಕೀಯದ ಮೇಲಾಟದಲ್ಲಿ ನಮ್ಮ ಗಣಪತಿಗೂ ಬಿಡುವಿಲ್ಲ. ಮೂರು ದಿನಗಳಿಂದ ಅವನ ಮುಖದರ್ಶನವೇ ಇಲ್ಲ. ಎಲ್ಲಿ ಹಾಳಾಗಿ ಹೋದನೋ ಏನೋ? (ಅತ್ತಿತ್ತ ನೋಡಿ ಕರೆಯುವಳು) ಏ, ಗಣಪತಿ....ಏ, ಗಣಪತಿ....

ಗಣಪತಿ: (ಪ್ರವೇಶಿಸಿ) ಏ, ವಾಚಾಳಿ ಹೆಣ್ಣೆ! ನನ್ನನ್ನು ಗಣಪತಿ ಅಂತ ಕೂಗಿದರೆ ಜಾಗ್ರತೆ! ಮಹಾಮಂತ್ರಿ ಅಂತ ಮರ್ಯಾದೆಯಿಂದ ಸಂಬೋಧಿಸಬೇಕು, ತಿಳಿಯಿತೆ?

ಜಯಂತಿ: ಅಂದ್ರೆ, ನೀನೂ ಒಂದು ಮಹತ್ಕಾರ್ಯಕ್ಕೆ ಕೈಹಾಕಿರುವಿ ಅಂತ ಕಾಣಿಸುತ್ತೆ.

ಗಣಪತಿ: ಮತ್ತೆ....ಯುವರಾಜ ಕೃಷ್ಣಕುಮಾರರು ಹಿರಿಯ ದೊರೆಗಳ ಮೇಲೆ ಯುದ್ಧ ಸಾರಲು ನರಸಿಂಹವರ್ಮರ ರಾಜ್ಯಕ್ಕೆ ಸೈನ್ಯ ಸಹಾಯ ಕೇಳಲು ಹೋಗಿರುತ್ತಾರೆ. ಸೇನಾಧಿಪತಿ ಬಾಲಾದಿತ್ಯರು ದಕ್ಷಿಣ ದೇಶಕ್ಕೆ ದಂಗೆಯಡಗಿಸಲು ತೆರಳಿದ್ದಾರೆ. ಇನ್ನುಳಿದ ಬಂಕರಸರನ್ನು ರಾಜ್ಯದಿಂದ ಹೊರಗಟ್ಟಿದರೆ ಯುವರಾಜರಿಗೆ ಆಕ್ರಮಣ ಮಾಡಲು ಸುಲಭವಾಗುವುದು. ಮತ್ತೆ....ಈ ಗಣಪತಿಯೇ ಮಹಾಮಂತ್ರಿ.

ಜಯಂತಿ: ನಾನು?

ಗಣಪತಿ: ಮಂತ್ರಿಣಿ. ಮತ್ತೆ....ನಿನಗೆ ಕೈಗೆ ಕಾಲಿಗೆ ಆಭರಣ—ಹಿಂದೆ ಸೇವಕರು ಮುಂದೆ ಸೇವಕರು—ಉಡಲು ಪಿತಾಂಬರ—ತೊಡಲು ಬಂಗಾರ—ತಿನ್ನಲು ಹೋಳಿಗೆ, ಚಿರೋಟಿ, ಕೀರು.

ಜಯಂತಿ: ಸಾಕು! ಸಾಕು! ಅದೋ, ಬಂಕರಸರು ಇತ್ತ ಬರುತ್ತಿರುವರು.

ಗಣಪತಿ: ಬಂಕರಸರು ಬಂದರೇ? ಜಯಂತಿ, ಇದೇ ಸುಸಮಯ. ಏನಾದರೂ ಮಾಡಿ ನಿನ್ನ ತಲೆ ಓಡಿಸು ನೋಡೋಣ.

ಜಯಂತಿ: ಅಯ್ಯೋ, ನನ್ನ ತಲೆ ಎಲ್ಲಿಗೂ ಓಡದು. ನೀನೇ ಓಡಿಸು ನೋಡೋಣ.

ಗಣಪತಿ: (ತುಸು ಆಲೋಚಿಸಿ) ಹ್ಞಾಂ! ಓಡಿತು, ಬಹು ದೂರ ಓಡಿತು. ಹೊಡಿ! ಬೇಗ ಹೊಡಿ!

ಜಯಂತಿ: ಯಾರಿಗೆ? ಯಾವುದರಿಂದ?

ಗಣಪತಿ: ಅಳ್ವೆ! ಬೊಬ್ಬೆ ಹೊಡಿ.

(ಜಯಂತಿ ರೋದಿಸತೊಡಗುವಳು; ಬಂಕರಸನು ಪ್ರವೇಶಿಸುವನು.)

ಬಂಕರಸ: ಗಣಪತಿ, ಈ ದಾಸಿ ಏತಕ್ಕಾಗಿ ರೋದಿಸುತ್ತಿರುವಳು?

ಗಣಪತಿ. ದೊರೆಗಳೇ, ವನವಿಹಾರಕ್ಕೆಂದು ತೆರಳಿದ ನಮ್ಮ ದಾಸಿಯರನ್ನು ಪುಂಡರು ಸೆರೆಹಿಡಿದುಕೊಂಡು ತೆರಳಿದರಂತೆ. ಆದರೆ, ಈ ಜಯಂತಿ ಹೇಗೋ ಅವರ ಕೈಯಿಂದ ತಪ್ಪಿಸಿಕೊಂಡು ಬಂದು, ಈ ವಿಷಯವನ್ನು ತಿಳಿಸಿದಳು.

ಬಂಕರಸ: ನಾನೀಗಲೇ ಅರಮನೆಗೆ ತೆರಳಿ ಈ ವಿಷಯವನ್ನು ಚಕ್ರವರ್ತಿಗಳಲ್ಲಿ ಬಿನ್ನವಿಸಿಕೊಂಡು, ಅವರ ಅಪ್ಪಣೆ ಪಡೆದು, ಆ ನಿರ್ಭಾಗ್ಯ ತರುಣಿಯರ ನೆರವಿಗಾಗಿ ತೆರಳುತ್ತೇನೆ. ನೀನು ಈ ದಾಸಿಯನ್ನು ಸಂತೈಸುತ್ತಿರು.

ಗಣಪತಿ: ದೊರೆಗಳೇ, ತಾವು ವಿಳಂಬಮಾಡಿದರೆ ಆ ಪುಂಡರು ನಮ್ಮ ನಾಡಿನ ಗಡಿ ದಾಟಿ ಪಾರಾಗಬಹುದು. ನಾನೇ ಈ ವಿಷಯವನ್ನು ಚಕ್ರವರ್ತಿಗಳ ಗಮನಕ್ಕೆ ತರುವೆನು.

ಬಂಕರಸ: ಹಾಗೆಯೇ ಆಗಲಿ, ಗಣಪತಿ. ಆದರೆ, ನಾನು ಹಿಂತೆರಳಿ ಬರುವ ವರೆಗೂ ನಮ್ಮ ಕೋಟೆಯ ಮಹಾದ್ವಾರವನ್ನು ಜಾಗ್ರತೆಯಿಂದ ಕಾಯುತ್ತಿರು. (ತೆರಳುವನು.)

ಗಣಪತಿ: ನನ್ನ ತಲೆಯನ್ನು ಹೇಗೆ ಓಡಿಸಿದೆನು ನೋಡು! ಜಯಂತಿ ಅಲ್ಲ.... ಅಲ್ಲ.... ಮಂತ್ರಿಣಿ....

ಜಯಂತಿ: ಎಷ್ಟಾದರೂ ನೀನು ಮುಂದಿನ ಮಹಾಮಂತ್ರಿ ಅಲ್ವೇ!

ಗಣಪತಿ: ಮತ್ತೆ....

(ಇಬ್ಬರೂ ಹೋಗುವರು.)

ದೃಶ್ಯ ೩

(ಉದ್ಯಾವನ. ಮಮತಾ, ಹಾಡುತ್ತಾ ಹೂ ಕೊಯ್ಯುತ್ತಿರುವಳು. ಯುವ ರಾಜ ಕೃಷ್ಣಕುಮಾರನು ಹಿಂಬಂದಿಯಿಂದ ಬಂದು ಕಣ್ಣು ಮುಚ್ಚುವನು.)

ಮಮತಾ: ಇದೇನು, ಯುವರಾಜರು ಅರಮನೆಯ ಆತಿಥ್ಯವನ್ನು ಬಿಟ್ಟು ಅವಸರವಾಗಿ ಉದ್ಯಾವನಕ್ಕೆ ಚಿತ್ತೈಸಿದಿರಿ?

ಕೃಷ್ಣ: ಮಮತಾ, ಇದೀಗ ನನ್ನನ್ನು ಕರ್ತವ್ಯದ ಕರೆಯು ಎಚ್ಚರಿಸುತ್ತಿರುವುದು. ರಾಜ್ಯದಲ್ಲಿ ಮಹಾರಾಜರನ್ನು ಬಿಟ್ಟು ಮತ್ತಾರೂ ಇಲ್ಲವೆಂದು ಗಣಪತಿಯು ಗುಪ್ತಚಾರಕರ ಮೂಲಕ ಹೇಳಿ ಕಳುಹಿಸಿದ್ದಾನೆ. ಈ ಸುಸಮಯದಲ್ಲೇ ನಿನ್ನ ಪಿತೃಪಾದರು ಇತ್ತ ಸೈನ್ಯ ಸಹಾಯವನ್ನೊಡಗೂಡಿಕೊಂಡು ರಾಜ್ಯವನ್ನು ಮುತ್ತಬೇಕಾಗಿದೆ. ನನ್ನನ್ನು ಹಸನ್ಮುಖದಿಂದ ಬೀಳ್ಕೊಡುವಿಯಾ?

ಮಮತಾ: ದೊರೆಯೇ, ಪ್ರಕೃತಿ ದೇವಿಯ ಸಾಕ್ಷಿಯಾಗಿ ನೀವು ನನ್ನನ್ನು ವರಿಸಿರುವಿರಿ. ನಿಮ್ಮ ಮಧುರ ಸಾನಿಧ್ಯವನ್ನು ತೊರೆಯಲು ಮನಸ್ಸಿಲ್ಲದಿದ್ದರೂ ವೀರ ಕರ್ನಾಟಕ ವನಿತೆಯಾಗಿ ವಿಜಯಯಾತ್ರೆಗೆ ಹೊರಟ ನಿಮ್ಮನ್ನು ಆತಂಕಿಸುವುದಿಲ್ಲ. ಆದರೂ ಪತಿದೇವ, ಜನ್ಮವಿತ್ತ ಜನಕನೊಡನೆ ಹೋರಾಡುವ ಮುಂಚೆ ಇನ್ನೊಮ್ಮೆ ಯೋಚಿಸಿ ನೋಡಿರಿ! ಇದೇ ನನ್ನ ಕೊನೆಯ ಬೇಡಿಕೆ.

ಕೃಷ್ಣ: ಮಮತಾ, ಅವಮಾನದ ಸೇಡು ನನ್ನ ಪ್ರತಿಯೊಂದು ದೇಹದ ಕಣ ಕಣಗಳಲ್ಲೂ ಕಿಡಿಯಾಗಿ ಸಿಡಿಯುತ್ತಿರುವುದು. ಅಪ್ಪಾಜಿಯವರ ಅಧಿಕಾರದ ಅಹಂಕಾರವನ್ನು ತುಳಿಯದೆ ರಾಜಗುರುಗಳ ಸರ್ವಾಧಿಕಾರವನ್ನು ಸದೆ ಬಡಿಯದೆ ಈ ಕುದಿಯುತ್ತಿರುವ ಮನಸ್ಸಿಗೆ ಶಾಂತಿಯಿಲ್ಲ.

ಮಮತಾ: ಪತಿದೇವ, ನಿಮ್ಮ ಸೇಡಿನ ಉನ್ಮಾದದಲ್ಲಿ ರಾಜಗುರುಗಳ ಮೇಲೆ ಕೈಮಾಡಿ ಬ್ರಹ್ಮಹತ್ಯಾ ದೋಷಕ್ಕೆ ಈಡಾಗಬೇಡಿ. ಈ ಹಿಂದೆ ಕರ್ನಾಟಕ ಸಾಮ್ರಾಜ್ಯದಲ್ಲಿ ಆಳುವ ಅರಸರಿಲ್ಲದೆ, ಅನ್ಯಾಯ–ಅನೀತಿಗಳು ತಾಂಡವವಾಡುತ್ತಿರುವಾಗ, ನ್ಯಾಯ–ನೀತಿಗಳನ್ನು ಧರ್ಮದ ಬಲದಿಂದ ಸ್ಥಾಪಿಸಿದವರು ಗುಣಭದ್ರಾಚಾರ್ಯರು. ಅಂತಹ ಮಹಾತ್ಮರ ಮೇಲೆ ಕೈಮಾಡಿ ಬ್ರಹ್ಮಶಾಪಕ್ಕೆ ಗುರಿಯಾಗಬೇಡಿ ದೊರೆಯೇ!

ಕೃಷ್ಣ: ಮಮತಾ, ರಾಜಕೀಯದಲ್ಲಿ ನೀನು ಏನೂ ಅರಿಯದ ಹಸುಗೂಸು. ಈಗ ನನ್ನನ್ನು ನಗುಮೊಗದಿಂದ 'ಜಯವಾಗಲಿ' ಎಂದು ಬಯಸಿ ತುಂಬು ಹೃದಯದಿಂದ ಬೀಳ್ಕೊಡುವೆಯಾ?

ಮಮತಾ: ಸ್ವಾಮಿ, ತಮ್ಮ ಚರಣಸೇವೆಯ ಭಾಗ್ಯ ಇನ್ನೆಂದು?

ಕೃಷ್ಣ: ಬತ್ತಳಿಕೆಯಲ್ಲಿರುವ ಬಾಣ ಗುರಿ ಮುಟ್ಟಿದೊಡನೆ.

ಮಮತಾ: ರಾಜಮುಕುಟ ತಲೆಗೇರಿದಾಗ, ಈ ನಿರ್ಭಾಗ್ಯೆಯನ್ನು ಮರೆಯಬೇಡಿ ದೇವ!

ಕೃಷ್ಣ: ಸತ್ತು ಸ್ವರ್ಗದಲ್ಲಿರುವ ಮಾತೃದೇವತೆಯ ಸಾಕ್ಷಿಯಾಗಿ ನಿನ್ನನ್ನು ಮರೆಯಲಾರೆ ಮಮತಾ. ನನ್ನ ಬಾಹ್ಯದೇಹವು ನಿನ್ನನ್ನು ಬಿಟ್ಟು ಅಗಲಿದರೂ ಹೃದಯ ನಿನ್ನನ್ನು ಬಿಟ್ಟು ಅಗಲದು.

ಮಮತಾ: ನಂಬಿದವರಿಗೆ ಇಂಬನ್ನೀಯುವ ಜಗದಂಬೆಯು ನಿಮಗೆ ಮಂಗಳವನ್ನುಂಟು ಮಾಡಲಿ. (ನಮಸ್ಕರಿಸುವಳು.)

(ಇಬ್ಬರೂ ತೆರಳುವರು.)

ದೃಶ್ಯ ೪

(ರಾಜಬೀದಿ. ಬಾಲಾದಿತ್ಯನು ಬುಡಬುಡಕೆಯವನ ವೇಷದಲ್ಲಿ ಪ್ರವೇಶಿಸುವನು. ಅವನಿಗೆ ಎದುರಾಗಿ ಗಣಪತಿಯು ಬರುವನು.)

ಬಾಲಾದಿತ್ಯ: ಜಯವಾಗಲಿ! ಜಯವಾಗಲಿ! ಮಹಾರಾಜರಿಗೆ ಜಯವಾಗಲಿ. ಮೂಡಲ ಬಾನಿನ ಮಡಿಲಿನೊಳಗೆ ಪಡುವಲ ಕಡಲಿನ ಒಡಲಿನ ಒಳಗೆ ಶಕುನದ ಹಕ್ಕಿಯು ಕೂಗುತ್ತೈತೆ. ಜಯವಾಗಲಿ. (ಗಣಪತಿಯ ಸಮೀಪ ಬಂದು) ಅರಸುಗುವರನ ಆಜೆಗೆ ಅಟ್ಟಿದಿ, ಮಹಾಮಂತ್ರಿಯ ಮುಂಚೆಯೆ ಕಳುಹಿದಿ, ರಾಜ್ಯದಿ ಈಗ ಒಂಟಿಗೂಗೆಯು ಒಂದೇ ಕುಳಿತು ಒದರುತ್ತೈತೆ ಅಲ್ವೆ ಮಹಾರಾಜಾ!

ಗಣಪತಿ: ಬೇಷ್! ನಿಜವನ್ನೇ ನುಡಿದಿ. ಮತ್ತೆ........

ಬಾಲಾದಿತ್ಯ: ನಿನ್ನ ಮುಖದಲ್ಲಿ ರಾಜನ ತೇಜಸ್ಸು, ದೇಹದಲ್ಲಿ ನವ ಓಜಸ್ಸು, ಬಂಗಾರದ ಮೈಬಣ್ಣ, ನೀನು ಶೃಂಗಾರದ ಕಾಮಣ್ಣ. ಅಧಿಕಾರ ಅಂತಸ್ತು ನಿನ್ನೊಳು ಬಂದು, ಧೈರ್ಯ ಶೌರ್ಯ ನಿನ್ನಲಿ ತಂದು ತಿರುಪತಿ ತಿಮ್ಮಪ್ಪ ನಿನಗೆ ಜಯಮಾಡುವನು ಕಂಡ್ಯಾ ಮಹಾರಾಜಾ!

ಗಣಪತಿ: ಇದು ಸತ್ಯವೇ ಬುಡಬುಡಿಕೆ?

ಬಾಲಾದಿತ್ಯ: ಸುಳ್ಳು ಮಾತು ಒಂದೂ ಇಲ್ಲ. ಈ ಬುಡಬುಡಿಕೆಯು ಸುಳ್ಳು ಹೇಳುವವನಲ್ಲ, ನೂರು ದೇವರ ಅಣೆ, ಕೋಟಿ ಲಿಂಗಗಳ ಆಣೆ ಸುಳ್ಳು ಮಾತನ್ನೇ ನಾ ಕಾಣೆ. ಶಕುನದ ಹಕ್ಕಿಯು ನುಡಿಯುನು ಕೇಳು, ಬುಡಬುಡಕೆಯು ಹೇಳುವನು ನೋಡು.

ಗಣಪತಿ: ಇಗೋ ಈ ಹಾರ (ಕೊಡುವನು). ಮುಂದೆ ನಾನೇನು ಮಾಡಬೇಕೆಂದು ಹೇಳು.

ಬಾಲಾದಿತ್ಯ: ಒಂಟಿಯಾಗಿರುವುದು ಬೇಟೆ, ಅದರ ಸುತ್ತಲಿರುವುದು ಕೋಟೆ, ಪೂರ್ವದಲ್ಲಿ ಪ್ರಹಾರ ಪಶ್ಚಿಮದಲ್ಲಿ ಪರಾಜಯ, ದಕ್ಷಿಣದಲ್ಲಿ ದಂಗೆ, ಉತ್ತರವೇ ಉತ್ತಮವೆಂದು ಶಕುನದ ಹಕ್ಕಿಯು ಉಸುರುತಿದೆ ಕಂಡ್ಯಾ ಮಹಾರಾಜ ಒಂದೇ ದಾರಿಯಲಿ ಒಂಟಿಯಾಗಿ ಒಳನುಗ್ಗು, ಅಲ್ಲಿರುವ ಕೋಟೆಯ ಬಾಗಿಲ ಜಗ್ಗು, ಮುಂದೆ ನಿನಗಾಗಿ ಕಾದಿದೆ ಸಂತಸ ಹಿಗ್ಗು, ಕೇಳಿದೆಯಾ ಮಹಾರಾಜ. ಕಾರ್ಯವು ಕೈಗೂಡಿದಲ್ಲಿ ವಿಜಯ ಲಕ್ಷ್ಮಿಯು ಒಲಿದಲ್ಲಿ ಈ ಬುಡಬುಡಕೆಯನು ಮರೆಯಲು ಬೇಡ. ನಿನಗೆ ಜಯವಾಗುತ್ತೈತೆ. ಮಹಾರಾಜಾ ಜಯವಾಗುತ್ತೈತೆ.

ಗಣಪತಿ: ನೀನು ಅಂದಂತೆ ಆದ್ರೆ ಹಳೆಯಂಗಿ ಏತಕ್ಕೆ, ರತ್ನಖಚಿತ ವಾದ ಪಿತಾಂಬರವನ್ನೆ ಕೊಡುವೆನು. ಹಾಗೇ ಅರಮನೆಗೆ ಬಾ. ನಾನೀಗ ಹೋಗುವೆನು. (ತೆರಳುವನು.)

ಬಾಲಾದಿತ್ಯ: ಎಲಾ ವಿಷಜಂತುವೆ! ಹೊಟ್ಟೆಯ ಮಗನಂತೇ ಸಾಕಿ ಸಲಹಿದ ಚಕ್ರವರ್ತಿಗಳಿಗೇ ಎರಡನ್ನು ಬಗೆದೆಯಾ! ನಿನ್ನ ಸ್ವಾರ್ಥಕ್ಕಾಗಿ ಕನ್ನಡ ನಾಡನ್ನು ಪರಕೀಯರ ಉಡಿಯಲ್ಲಿ ಕೆಡವಲು ಹೊಂಚುಹಾಕು ತ್ತಿರುವೆಯಾ! ನಡೆಯಲಿ ನಿನ್ನ ಕಾರಸ್ಥಾನ. ನಿನ್ನ ಹೊಟ್ಟೆಯನ್ನು ಹೊಕ್ಕಿ ಹೃದಯ ಭೇದಿಸಿ ಕನ್ನಡ ನಾಡಿನ ಹೆಬ್ಬಾಗಿಲಿಗೆ ನಿನ್ನ ದೇಹವನ್ನು ಸೀಳಿ ತೋರಣ ಹಾಕದಿದ್ದಲ್ಲಿ ನಾನು ವೀರ ಬಂಕರಸನ ಪುತ್ರ ಬಾಲಾ ದಿತ್ಯನಲ್ಲ.

(ಹೋಗುವನು.)

ದೃಶ್ಯ ೫

(ಗುಣಭದ್ರಾಚಾರ್ಯರ ಆಶ್ರಮ.)

ಗುಣ: ಯಾವ ಕನ್ನಡಿಗರು ತಮ್ಮ ತೋಳಬಲದಿಂದ ಕಾವೇರಿಯಿಂದ ಗೋದಾವರಿ ವರೆಗೆ ವಿಜಯಪತಾಕೆಯನ್ನು ಎತ್ತಿ ಹಿಡಿದಿದ್ದರೋ, ಯಾವ ಕನ್ನಡಿಗರ ಹೆಸರನ್ನು ಕೂಡಾ ಎತ್ತಲು ವೈರಿಗಳು ಅಂಜುತ್ತಿದ್ದರೋ, ಯಾವ ಕನ್ನಡಿಗರು ಕರ್ಣನಂತೆ ದಾನಶೂರರೂ, ಪಾರ್ಥನಂತೆ ಪರಾಕ್ರಮಿಗಳೂ, ಹರಿಶ್ಚಂದ್ರನಂತೆ ಸತ್ಯಸಂಧರೂ ಆಗಿದ್ದರೋ, ಯಾವ ಕನ್ನಡಿಗರು ದೇಶಕ್ಕಾಗಿ ತಾವು ಹೊರಟು ತಮ್ಮ ಮಹಿಳೆಯರ ಕೈಗಳಿಗೂ ರಣಕಂಕಣವನ್ನು ಕಟ್ಟಿ ಯುದ್ಧಭೂಮಿಗೆ ಕಳುಹಿಸಿದ್ದರೋ ಅಂತಹ ಕನ್ನಡಿಗರೇ ಹತವೀರ್ಯರಾಗಬೇಕಾಯಿತೇ? ಕರ್ಣಾಟಕ ಮಾತೆಯ ಮುಕುಟವು ಧರೆಗುರುಳುವುದನ್ನು ನನ್ನೀ ಕಣ್ಣುಗಳಿಂದ ನೋಡುತ್ತಿರಬೇಕಾಯಿತೇ?

ಬಾಲಾದಿತ್ಯ: (ಪ್ರಣಾಮ ಮಾಡಿ) ಗುರುವರ್ಯ, ಪ್ರಣಾಮ.

ಗುಣ: ಬಾಲಾದಿತ್ಯ, ದಕ್ಷಿಣ ದೇಶದ ದಂಗೆಯ ವಿಚಾರ ಏನಾಯ್ತು?

ಬಾಲಾದಿತ್ಯ: ದೇವಾ, ಯಾರೋ ದುರಾಚಾರಿಗಳು ಉದ್ದೇಶಪೂರ್ವಕವಾಗಿಯೇ ಹಬ್ಬಿಸಿದ ವಾರ್ತೆಯಿದು. ಅಲ್ಲಿ ಯಾವ ದಂಗೆ ಗಲಭೆಗಳಾಗದೆ ಜನರು ನೆಮ್ಮದಿಯಿಂದಿರುವರು.

ಗುಣ: ಕುಮಾರ, ಈಗ ನಮ್ಮ ರಾಜ್ಯಕ್ಕೆ ಬಂದೊದಗಿರುವ ಆಪತ್ತನ್ನು ಅರಿತಿರುವೆಯಾ?

ಬಾಲಾದಿತ್ಯ: ಹೌದು ದೇವ, ಯುವರಾಜ ಕೃಷ್ಣಕುಮಾರರೇ ನರಸಿಂಹವರ್ಮನ ಸೈನ್ಯವನ್ನು ಒಡಗೂಡಿಗೊಂಡು ರಾಜ್ಯದ ಗಡಿಯಲ್ಲಿ ಬೀಡುಬಿಟ್ಟಿದ್ದಾರೆ. ಆ ಕಪಟಿ ಗಣಪತಿಯೇ ಕೋಟೆಯ ಗುಪ್ತದ್ವಾರವನ್ನು ವೈರಿಗಳ ಪ್ರವೇಶಕ್ಕಾಗಿ ತೆರೆದಿಡುವ ಯತ್ನದಲ್ಲಿದ್ದಾನೆ.

ಗುಣ: ತಬ್ಬಲಿಯೆಂದು ತೊಡೆಯಲ್ಲಿ ಮಲಗಿಸಿ ಸಾಕಿಸಲಹಿದ ಗಣಪತಿಯೂ ನಮಗೆ ದ್ರೋಹ ಬಗೆದನೇ?

ಬಾಲಾದಿತ್ಯ: ಚಿಂತಿಸಬೇಡಿ ಗುರುದೇವ. ತಮ್ಮ ಆಶೀರ್ವಾದ, ಕರ್ನಾಟಕ ಮಾತೆಯ ಸೇವೆಮಾಡುವ ಭಾಗ್ಯ ಇವಿಷ್ಟಿದ್ದರೆ ಯಾವ ಕಡೆ

ಯಿಂದ ಯಾವ ಆಪತ್ತು ಬಂದರೂ ಎದೆಗೆಡದೆ ಹೋರಾಡಿ ವಿಜಯ ಗಳಿಸುವ ಭರವಸೆ ನನ್ನಲ್ಲಿದೆ.

ಗುಣ: ವೀರ ಕುವರ, ನಿನ್ನನ್ನು ಪಡೆದ ಕರ್ನಾಟಕ ಮಾತೆಯೇ ಧನ್ಯಳು. ಕ್ರೋಧದಿಂದ ಉನ್ಮತ್ತವಾಗಿರುವ ನೃಪತುಂಗನು ಮಗನನ್ನು ಎದುರಿಸಲು ಒಂಟಿಯಾಗಿ ಕೋಟೆಯ ಹೊರಬಾಗಿಲ ಕಡೆಗೆ ತೆರಳಿದ್ದಾನೆ. ನೀನು ತಡಮಾಡದೆ ಆತನ ರಕ್ಷಣೆಗಾಗಿ ತೆರಳು. ಜಗದೀಶ್ವರನು ನಿನಗೆ ಮಂಗಲವನ್ನು ಮಾಡಲಿ.

ಬಾಲಾದಿತ್ಯ: ಮಹದಾಜ್ಞೆ ಮಹಾತ್ಮರೇ. (ನಮಸ್ಕರಿಸಿ ಹೋಗುವನು.)

ದೃಶ್ಯ ೬

(ಕೋಟೆ ಹೊರಬಾಗಿಲಿನ ಕಿರು ಮಾರ್ಗ.)

ಕೃಷ್ಣ: ನೃಪತುಂಗ! ಹೊಟ್ಟೆಯ ಮಗನಲ್ಲೇ ಹಗೆ ಸಾಧಿಸಿದ ನೀನು ವೈರಿಗಳನ್ನು ಹೇಗೆ ಗೆಲ್ಲುವಿ ನೋಡುತ್ತೇನೆ. ತುಂಬಿದ ರಾಜಸಭೆಯಲ್ಲಿ ಬಾಲಾದಿತ್ಯನಿಗೆ ಸೇನಾಧಿಪತ್ಯವನ್ನು ಕಟ್ಟಿ ನನ್ನನ್ನು ಅವಮಾನಿಸಿದೆ ಯಲ್ಲವೆ? ಕಪಟಿ ಗುಣಭದ್ರಾಚಾರ್ಯನ ಮರುಳುಮಾತಿಗೆ ಬೆಲೆ ಕೊಟ್ಟು ನನ್ನ ಮೇಲೆ ಕೈ ಎತ್ತಲು ಬಂದಿರುವೆಯಾ? ನೋಡುತ್ತಿರು. ಅಸ್ತಮಿಸಿದ ರವಿಯು ಉದಯಿಸುವುದರೊಳಗಾಗಿ ಕರ್ನಾಟಕದ ಇತಿಹಾಸವೇ ಬದಲಾಗಲಿದೆ. ನಿನ್ನ ಅಖಂಡ ಕೋಟೆ, ಸೈನ್ಯಸಾಗರ, ಬಿರುದಾಂಕಿತ ಜನವಾಸಿಗಳು ಇವೆಲ್ಲವನ್ನೂ ಬಿರುಗಾಳಿಗೆ ತೂರಿಬಿಟ್ಟ ತರಗಲೆಯಂತೆ ಹಾರಿಸಿಬಿಡುವೆನು. ಮತ್ತೆ ಗುಣಭದ್ರಾಚಾರ್ಯ! ನಿನ್ನ ಹಣೆಯ ಮೆಟ್ಟಲು ಮಾಡಿ ನನ್ನ ಆಸ್ಥಾನದ ಬಾಗಿಲಲ್ಲಿರಿಸುವೆನು.

ಸೈನಿಕ: (ಪ್ರವೇಶಿಸಿ) ಮಹಾಪ್ರಭೋ, ಕೋಟೆಯ ಬಾಗಿಲು ತೆರೆಯಿತೆಂದು ಗಣಪತಿಯ ಕಡೆಯ ಸೈನಿಕರಿಂದ ಸಂದೇಶ ಬಂದಿದೆ.

ಕೃಷ್ಣ: ಸಕಲ ಸೈನ್ಯವನ್ನು ತೆಗೆದುಕೊಂಡು ಕೋಟೆಯ ಮಹಾದ್ವಾರದ ಕಡೆಗೆ ತೆರಳುವಂತೆ ಸೇನಾಧಿಪತಿಗೆ ತಿಳಿಸು.

ಸೈನಿಕ: ಅಪ್ಪಣೆ. (ತೆರಳುವನು.)

ದೃಶ್ಯ ೭

(ಕೋಟೆಯ ಹೊರಬಾಗಿಲು.)

ಕೃಷ್ಣ: ಸೇನಾಧಿಪತಿ, ಸೈನ್ಯವನ್ನು ಕೋಟೆಯ ಹೊರಬಾಗಿಲಲ್ಲೇ ನಿಲ್ಲಿಸು. ನಾನು ನಮ್ಮ ಮುಂದಿನ ದಾರಿಯು ಸುಗಮವೆಂದು ತಿಳಿದೊಡನೆ ಸಂಕೇತ ಕೊಡುವೆನು. ಆಗ ಸೈನ್ಯವನ್ನು ಇಬ್ಭಾಗವಾಗಿ ಮಾಡಿ ಎರಡು ಕಡೆಗಳಿಂದಲೂ ರಾಜ್ಯವನ್ನು ಮುತ್ತಬೇಕು.

ಸೇನಾಧಿಪತಿ: ಅಪ್ಪಣೆ ಪ್ರಭೊ! (ಹೋಗುವನು.)

ಕೃಷ್ಣ: (ಕೈಮುಗಿದು) ಅಮ್ಮಾ, ಈ ಪ್ರಪಂಚದಲ್ಲಿ ನನ್ನನ್ನು ತಬ್ಬಲಿಯನ್ನಾಗಿ ಮಾಡಿ ತೆರಳಿದೆಯಾ? ಇಂದು ಒಬ್ಬರೂ ನನ್ನಲ್ಲಿ ಪ್ರೀತಿ–ವಿಶ್ವಾಸಗಳನ್ನು ತೋರಿಸುವವರಿಲ್ಲ. ಬದಲಾಗಿ ಅಪಮಾನ ಅಧಿಕಾರ ದರ್ಪಗಳ ಹೊಡೆತಗಳಿಂದ ಬೆಂದು ಬಳಲಿದ್ದೇನೆ. ಈಗ ನನ್ನ ಪ್ರತೀಕಾರದ ಪೂರ್ತಿಕೆಗಾಗಿ ಅಪ್ಪಾಜಿಯವರಲ್ಲೇ ಸಂಗ್ರಾಮಕ್ಕಾಗಿ ತೆರಳುತ್ತಿದ್ದೇನೆ. ವಿಜಯಲಕ್ಷ್ಮಿಯು ನನಗೆ ಪ್ರಸನ್ನಳಾಗಲೆಂದು ಸ್ವರ್ಗದಿಂದ ಹರಸು.

(ಒರೆಯಿಂದ ಖಡ್ಗವನ್ನೆಳೆದು ಪ್ರಣಾಮಮಾಡಿ ಮುಂದಾಗುವನು. ಅಷ್ಟರಲ್ಲೇ ನೃಪತುಂಗನು ಎದುರಾಗುವನು.)

ನೃಪತುಂಗ: ಕೃಷ್ಣ, ನಿಲ್ಲಲ್ಲಿ!

ಕೃಷ್ಣ: ಯಾರು? ಅಪ್ಪಾಜಿ? ಅರಮನೆಯ ದ್ವಾರ ಕಾಯುತ್ತಿರುವ ಸೇವಕನಿಗೆ ಆಜ್ಞೆಕೊಡುವಂತೆ ಮಾತಾಡುತ್ತಿರುವಿರಿ!

ನೃಪತುಂಗ: ಕೃಷ್ಣ, ಜನ್ಮಭೂಮಿಗೆ ದ್ರೋಹ ಬಗೆಯುತ್ತಿರುವ ನಿನಗೆ ಕೊನೆಯ ಬಾರಿ ವಿವೇಕವನ್ನು ಹೇಳುತ್ತಿರುವೆನು. ಸಂಪತ್ತು ಸಮೃದ್ಧಿಯಾಗಿ ತುಂಬಿತುಳುಕುತ್ತಿರುವ ಕನ್ನಡ ನಾಡನ್ನು ಅನ್ಯರ ಅಧೀನ ಮಾಡಬೇಡ. ನಿನ್ನ ಈ ಪ್ರಯತ್ನವನ್ನು ಇಲ್ಲಿಗೇ ಮುಕ್ತಾಯಗೊಳಿಸು. ನಿನ್ನನ್ನು ಮಗನೆಂದು ಮಮತೆಯಿಂದ ಆಲಿಂಗಿಸಿ ಆಸ್ಥಾನಕ್ಕೆ ಕರೆದೊಯ್ಯುವೆನು.

ಕೃಷ್ಣ: ಅಪ್ಪಾಜಿ, ಅಂದು ತುಂಬಿದ ಓಲಗದಲ್ಲಿ ನನ್ನನ್ನು ಅವಮಾನಿಸುವಾಗ ಈ ಮಗನೆಂಬ ಅಭಿಮಾನ ಎಲ್ಲಿ ಹೋಗಿತ್ತು? ಮಾತು ಮಾತಿಗೂ ದೇಶದ್ರೋಹಿ ದೈವದ್ರೋಹಿ ಎಂದು ನಿಂದಿಸುವಾಗ ಈ ಮಮತೆ ಎಲ್ಲಿ ಅಡಗಿತ್ತು? ಈಗ ನಾನು ನಿಮ್ಮಲ್ಲಿ ಸಂಧಾನಕ್ಕಾಗಿ ಬಂದಿಲ್ಲ, ಸಂಗ್ರಾಮ

ಕ್ಕಾಗಿ ಬಂದಿದ್ದೇನೆ. ನಿಮ್ಮಲ್ಲಿ ಶಕ್ತಿ-ಸಾಮರ್ಥ್ಯಗಳಿದ್ದರೆ ಮುಂದಾಗಿರಿ. ಇಲ್ಲವೇ ರಾಜ್ಯಸೂತ್ರವನ್ನು ನನ್ನ ಕೈಗೊಪ್ಪಿಸಿ ನಿಶ್ಚಿಂತರಾಗಿರಿ.

ನೃಪತುಂಗ: ಛೀ ದೇಶದ್ರೋಹಿ! ನನ್ನ ದೇಹದಲ್ಲಿ ಒಂದು ಬಿಂದು ರಕ್ತವಿರುವ ತನಕ ಕನ್ನಡಭೂಮಿಗೆ ಅನ್ಯರ ನೆರಳನ್ನೂ ಬೀಳಲು ಬಿಡಲಾರೆನು. ಜನ್ಮವಿತ್ತ ನಿನ್ನೊಡನೆ ಹೋರಾಡುವಂತೆ ವಿರೂಪಾಕ್ಷನ ಪ್ರೇರಣೆಯಿದ್ದರೆ ಅದೂ ನಡೆದು ಹೋಗಲಿ. ಜೈ ವಿರೂಪಾಕ್ಷ! (ಇಬ್ಬರೊಳಗೂ ಖಡ್ಗಯುದ್ಧವಾಗುವುದು. ಅಷ್ಟರಲ್ಲಿ ಹಿಂದಿನಿಂದ ಗಣಪತಿಯು ಬಂದು ನೃಪತುಂಗನನ್ನು ಬಂಧಿಸುವನು). ಎಲಾ! ವಿಷ ಜಂತುವೆ! ಹೋರಾಡುತ್ತಿದ್ದ ನನ್ನನ್ನು, ಹೇಡಿಯಂತೆ ಹಿಂಬದಿಯಿಂದ ಬಂದು ಬಂಧಿಸಿದೆಯಾ?

ಕೃಷ್ಣ: ಹಲ್ಲು ಕಳೆದುಕೊಂಡ ಸರ್ಪದಂತೆ ಏತಕ್ಕೆ ಬುಸುಗುಟ್ಟುತ್ತಿರುವಿರಿ ಅಪ್ಪಾಜಿ? ಈಗಲಾದರೂ ನಿಮ್ಮ ಕುಮಾರ ಕೃಷ್ಣನ ಪರಾಕ್ರಮದ ಅರಿವಾಯಿತೆ?

ನೃಪತುಂಗ: ಇಲ್ಲ. ನಿನ್ನ ಪಾಪದ ಅರಿವಾಯಿತು. ಅದಕ್ಕಾಗಿ ಪಶ್ಚಾತ್ತಾಪಪಡುತ್ತೇನೆ.

ಕೃಷ್ಣ: ಗಣಪತಿ, ಮಹಾರಾಜರ ಕೈಕಾಲುಗಳನ್ನು ಕಟ್ಟಿಸಿ ಸಕಲ ಬಿರುದುಬಾವಲಿಗಳಿಂದ ಸೆರೆಮನೆಗೆ ಕೊಂಡೊಯ್ದು ಬಿಡು.

(ಗಣಪತಿ ಕಟ್ಟಿಹಾಕಲು ಮುಂದಾಗುವನು. ಅಷ್ಟರಲ್ಲಿ ಬಾಲಾದಿತ್ಯನು ಒಂದೇ ನೆಗೆತಕ್ಕೆ ಗಣಪತಿಯ ಮೇಲೆ ಹಾರಿ, ಕೆಡಹುವನು.)

ಬಾಲಾದಿತ್ಯ: ಯುವರಾಜ, ಕೋಟಿತೀರ್ಥದಲ್ಲಿ ಮುಳುಗಿದರೂ ಪವಿತ್ರಕ್ಷೇತ್ರಗಳನ್ನು ಸಂದರ್ಶಿಸಿದರೂ ಅನ್ನ ಆಹಾರಾದಿಗಳನ್ನು ಬಿಟ್ಟು ತಪಸ್ಸುಗೈದರೂ ಮಾತಾಪಿತರ ಚರಣಸೇವೆ ಮಾಡಿದಷ್ಟು ಪುಣ್ಯ ಲಭಿಸದು. ಅಂತಹ ಜನ್ಮದಾತನನ್ನು ಅನ್ಯರಿಂದ ಬಂಧಿಸಿ ಪರಿಹರಿಸಲಾರದ ಪಾಪಕ್ಕೆ ಕೊರಳೊಡ್ಡುವೆಯಾ?

(ಅಷ್ಟರಲ್ಲಿ ಗಣಪತಿಯು ಪಾರಾಗಲು ಪ್ರಯತ್ನಿಸುವನು. ಬಾಲಾದಿತ್ಯನು ಅವನನ್ನು ಹಿಡಿದು ನೃಪತುಂಗನ ಕಾಲಿನಬುಡದಲ್ಲಿ ಕೆಡಹುವನು.) ಎಲಾ ನೀಚ! ನಿನ್ನಂತಹ ದ್ರೋಹಿಗಳು ಈ ಪ್ರಪಂಚದಲ್ಲಿ ಇರಬಾರದು. ಇಗೋ, ನಿನ್ನ ದ್ರೋಹಕ್ಕೆ ತಕ್ಕ ಶಿಕ್ಷೆ (ಖಡ್ಗ ಎತ್ತುವನು).

ನೃಪತುಂಗ: ಬಾಲಾದಿತ್ಯ, ಶಾಂತನಾಗು! ತಪ್ಪು ಮಾಡುವುದು ಮಾನವನ ಲಕ್ಷಣ. ಅದನ್ನು ಮನ್ನಿಸುವುದು ಮಹಾತ್ಮರ ಧರ್ಮ. ಕ್ಷುಲ್ಲಕ ಜೀವಿಯನ್ನು ಕೊಂದು ನಿನ್ನ ಖಡ್ಗವನ್ನೇಕೆ ಅಪವಿತ್ರಗೊಳಿಸುವಿ? ಅವನನ್ನು ಸೈನಿಕರ ವಶಕ್ಕೆ ಒಪ್ಪಿಸು.

ಬಾಲಾದಿತ್ಯ: ಅಪ್ಪಣೆ ಮಹಾಪ್ರಭೋ!

ನೃಪತುಂಗ: ಹಾಗೆಯೇ ಕೃಷ್ಣನನ್ನು ಬಂಧಿಸಿ ನ್ಯಾಯಪೀಠದ ಮುಂದೆ ನಿಲ್ಲಿಸು. ಅವನ ಅಪರಾಧಕ್ಕೆ ತಕ್ಕ ಶಿಕ್ಷೆ ವಿಧಿಸಲೇ ಬೇಕು.

ಬಾಲಾದಿತ್ಯ: ಕನ್ನಡಿಗರ ದೇಶಪ್ರೇಮ-ನ್ಯಾಯನಿಷ್ಠೆಯು ಪ್ರಪಂಚಕ್ಕೆ ತಿಳಿಯಲಿ.

ದೃಶ್ಯ ೮

(ರಾಜಬೀದಿ. ಗಣಪತಿ ಮತ್ತು ಜಯಂತಿಯನ್ನು ಸೈನಿಕರು ಬಂಧಿಸಿರುವರು).

ಜಯಂತಿ: ಏ ಗಣಪತಿ, ನನಗೆ ಮಂತ್ರಿಣಿ ಮಾಡ್ತೇನೆ, ಅದು ಕೊಡ್ತೇನೆ ಇದು ಕೊಡ್ತೇನೆ ಅಂತ ಹೇಳಿ ಈಗ ಕೈಗೆ ಬೇಡಿಹಾಕಿಸಿದೆಯಲ್ಲಾ!

ಗಣಪತಿ: ನಿನ್ನ ಕೈಗೆ ಚಿನ್ನ—ಕಾಲಿಗೆ ಚಿನ್ನ— ಹಿಂದೆ ಸೇವಕರು— ಮುಂದೆ ಸೇವಕರು ಅಂತ ಹೇಳಿಲ್ವೆ? ಈಗ ನೋಡು. ಕೈಗೆ ಕಾಲಿಗೆ ಕಬ್ಬಿಣದ ಆಭರಣ, ಹಿಂದೆ ಮುಂದೆ ನಿನ್ನ ರಕ್ಷಣೆಗೆ ಸೇವಕರು. ನೀನು ಈಗ ಮಹಾಮಂತ್ರಿಣಿ ಕಣೆ!

ಜಯಂತಿ: ಥೂ! ನಿನ್ನ ಬಾಳಿಗೆ ಬೆಂಕಿ ಹಾಕ! ಅಂತಃಪುರದಲ್ಲಿ ದಾಸಿಯಾಗಿ ಸುಖದಿಂದ ಇದ್ದೆ. ಈಗ ನನಗೆ ಸೆರೆಮನೆಯ ಗತಿ ಮಾಡಿದೆಯಲ್ಲಾ!

ಗಣಪತಿ: ಯಾಕೆ ಅಳ್ತಿಯಾ ಮಂತ್ರಿಣಿ? ಹೆಂಗಸರಿಗೆ ಬುದ್ಧಿ ಜಾಸ್ತಿಯಾದರೆ ಒದಗುವ ದುರವಸ್ಥೆ ಇದೇ ಕಣೆ!

ಜಯಂತಿ: ಹೇಗಾದರೂ ಮಾಡಿ ಇವರ ಕೈಯಿಂದ ಪಾರಾಗುವಂತೆ ನಿನ್ನ ತಲೆ ಓಡಿಸು ನೋಡೋಣ.

ಗಣಪತಿ: ಈಗ ತಲೆ ಓಡಿಸಿದರೆ ತಲೆಯನ್ನೇ ಹಾರಿಸಿಬಿಟ್ಟಾರು.

ಚಿಂತಿಸಬೇಡ. ನಾನೂ ಇದ್ದೇನೆ. ಇಬ್ಬರೂ ಸಂತೋಷವಾಗಿ ಮಂತ್ರಿ-ಮಂತ್ರಿಣಿಯರಾಗಿ ಸೆರೆಮನೆಯಲ್ಲೇ ಇರೋಣ. (ಹೋಗುವರು)

ದೃಶ್ಯ ೯

(ನೃಪತುಂಗನ ಓಲಗ. ರಾಜಗುರು, ಬಾಲಾದಿತ್ಯ, ಬಂಕರಸರು ಕುಳಿತಿರುವರು. ಕೃಷ್ಣಕುಮಾರನು ಅಪರಾಧಿ ಸ್ಥಾನದಲ್ಲಿ ನಿಂತಿರುವನು).

ನೃಪತುಂಗ: ಗುರುವರ್ಯರೇ, ಹಾಗೂ ಮಹಾಮಂತ್ರಿಗಳೇ, ಆಳುವ ಅರಸನು ಅನ್ಯಾಯ ಅನೀತಿಗಳನ್ನು ನಿರ್ದಾಕ್ಷಿಣ್ಯವಾಗಿ ಎದುರಿಸಲೇ ಬೇಕು. ಅವನ ಈ ಸಾಹಸದಲ್ಲಿ ಸಂಸಾರ ವ್ಯಾಮೋಹ, ಅಧಿಕಾರದ ಅಂಜಿಕೆ ಯಾವುದೂ ಇರಬಾರದು. ಅಂತೆಯೇ ನನ್ನ ಬಡ ಜನತೆಯ ಒಡಲಿಗೆ ಕಿಚ್ಚಿಹಚ್ಚಿ ತಾನು ಸಂತುಷ್ಟನಾಗಬೇಕೆಂದು ಬಯಸಿದ ಕೃಷ್ಣಕುಮಾರನು ನ್ಯಾಯದೃಷ್ಟಿಯಲ್ಲಿ ಅಸಾಮಾನ್ಯ ಅಪರಾಧಿಯಾಗಿರುತ್ತಾನೆ. ಅವನ ಈ ದ್ರೋಹಕ್ಕೆ ನಾನು ನ್ಯಾಯಾಧಿಪತಿಯಾಗಿ ಮರಣದಂಡನೆಯನ್ನು ವಿಧಿಸಿದ್ದೇನೆ. (ಎಲ್ಲರೂ ಚಕಿತರಾಗುವರು)

ಬಂಕರಸ: ಚಕ್ರವರ್ತಿಗಳೇ............

ನೃಪತುಂಗ: ಬಲ್ಲೆ ಬಂಕರಸರೇ. ಮಗನೆಂದು ಎಚ್ಚರಿಕೆ ಕೊಡಬೇಕೆಂದು ಬಯಸಿದಿರಲ್ಲವೇ? ಕೂರಸಿ ಹೊನ್ನಿನದ್ದಾದರೂ ಹೃದಯವನ್ನಿರಿದರೆ ಮೃತ್ಯುಬರಬಹುದೆಂಬುದನ್ನು ಬಲ್ಲಿರಲ್ಲವೆ?

ಗುರು: ಮಹಾರಾಜಾ, ನಿನ್ನ ಕುಮಾರನ ವಿಷಯದಲ್ಲಿ ಇಷ್ಟು ಕಠೋರನಾಗಬೇಡ.

ನೃಪತುಂಗ: ಹಸಿದ ಹೆಬ್ಬುಲಿಯ ಮುಂದೆ ವೀಣೆಯ ಝುಣಾದ್ವನಿಯನ್ನೆಬ್ಬಿಸಿದರೆ ಅದು ಮಣಿಯಬಲ್ಲುದೇ ಗುರುದೇವಾ? ಕರ್ತವ್ಯಕ್ಕಾಗಿ ಕಠೋರನಾಗಬೇಕಾದುದು ನ್ಯಾಯಾಧಿಪತಿಯ ನಿಯಮವಲ್ಲವೇ?

ಮಮತಾ: (ಪ್ರವೇಶಿಸುವಳು). ಮಹಾರಾಜಾ, ಅನಾಥೆಯಾದ ಅಬಲೆಗೆ ಭಿಕ್ಷೆ ನೀಡುವಿರಾ?

ನೃಪತುಂಗ: ಅಮ್ಮಾ, ನೀನು ಕುಲೀನ ಮನೆತನದವಳಂತೆ ಕಾಣುತ್ತಿರುವೆ, ಮತ್ತೆ ಏತಕ್ಕಾಗಿ ಭಿಕ್ಷೆ ಕೇಳಲು ಬಂದಿರುವೆ?

ಮಮತಾ: ದಾನಧರ್ಮಗಳಲ್ಲಿ ಹೆಸರುವಾಸಿಯಾಗಿದ್ದು, ಈ ಅನಾಥೆಯೋರ್ವಳ ಬೇಡಿಕೆಯನ್ನು ಪೂರೈಸಲಾರೆಯಾ?

ನೃಪತುಂಗ: ಜಗದೀಶ್ವರನ ಸಾಕ್ಷಿಯಾಗಿಯೂ ನಿನ್ನ ಮಾತನ್ನು ನಡೆಸಿಕೊಡಬಲ್ಲೆ ಮಗಳೇ. ನಿನಗೆ ಬೇಕಾದುದನ್ನು ಕೇಳು.

ಮಮತಾ: ಚಕ್ರವರ್ತಿಗಳೇ, ನನಗೆ ಪತಿಭಿಕ್ಷೆಯನ್ನು ಕರುಣಿಸಿರಿ! (ಮೊಣಕಾಲೂರಿ ಕುಳಿತುಕೊಳ್ಳುವಳು)

ಗುಣಭದ್ರಾಚಾರ್ಯ: ಕುಮಾರಿ, ನೀನ್ಯಾರು? ನಿನ್ನ ಪತಿಗೆ ಬಂದೊದಗಿರುವ ಆಪತ್ತು ಯಾವುದು ಎಂಬುದನ್ನು ಚಕ್ರವರ್ತಿಗಳಲ್ಲಿ ಬಿನ್ನವಿಸು.

ಮಮತಾ: ಮಹಾತ್ಮರೇ, ನಾನು ನರಸಿಂಹವರ್ಮರ ಏಕಮಾತ್ರ ಪುತ್ರಿ. ಯುವರಾಜ ಕೃಷ್ಣಕುಮಾರರು ನನ್ನನ್ನು ಪ್ರಕೃತಿದೇವಿಯ ಮಡಿಲಲ್ಲಿ ಭಗವಾನ್ ಭಾಸ್ಕರನ ಸಾಕ್ಷಿಯಾಗಿ ವಿವಾಹವಾಗಿರುವರು. ಅವರಿಗೆ ಪ್ರಾಣದಾನವನ್ನಿತ್ತು, ನನಗೆ ಕೊಟ್ಟ ವಚನವನ್ನು ಪೂರೈಸಬೇಕಾಗಿ ಬೇಡುತ್ತೇನೆ.

ನೃಪತುಂಗ: ಕೃಷ್ಣ, [illegible] ಕುಮಾರಿ ಹೇಳುತ್ತಿರುವುದು ನಿಜವೇ?

ಕೃಷ್ಣ: ನಿಜ.

ನೃಪತುಂಗ: ಪೂಜ್ಯರೇ, ಕನ್ನಡಿಗರ ಕೀರ್ತಿಗೆ ಕಾರಣೀಭೂತರು ನೀವು. ಕನ್ನಡದ ಮಣ್ಣನ್ನು ಹೊನ್ನಾಗುವಂತೆ ಹರಸಿದವರೂ ನೀವು. ಈಗ ನಿಮ್ಮ [illegible] ಚರಣಸೇವಕನ ವಚನಭಂಗವಾಗದಂತೆ ತಮ್ಮ ಅಂಗೈ ತಲದಲ್ಲಿಟ್ಟು ರಕ್ಷಿಸಿ ನನ್ನನ್ನು [illegible] ಬಿಕ್ಕಟ್ಟನಿಂದ ಬಿಡುಗಡೆಗೊಳಿಸಿರಿ ಗುರುದೇವ!

ಗುಣ: ರಾಜ, ಇದು ಕೂಡ ಜಗದೀಶ್ವರನ ಲೀಲೆ. ನಿನ್ನ ಕುಮಾರನ ಮಾನಸಿಕ ಪರಿವರ್ತನೆಗೆ ಇದೊಂದು ಯೋಗ್ಯ ಸನ್ನಿವೇಶ. ಕುಮಾರನ ಗಾತ್ರದಷ್ಟೇ ಹಿಟ್ಟಿನ ಬೊಂಬೆಯನ್ನು ಮಾಡಿ ಅದನ್ನು ಗಲ್ಲಿಗೇರಿಸು. ಆಗ ನಿನ್ನ ಆಜ್ಞೆ ನೆರವೇರಿದಂತಾಯಿತು.

ನೃಪತುಂಗ: ಧನ್ಯನಾದೆ ಗುರುದೇವ! ಕೃಷ್ಣ, ಈಗಲಾದರೂ ನಿನ್ನ ಹೃದಯದಲ್ಲಿ ವಿವೇಕದ ಜ್ಯೋತಿಯನ್ನು ಬೆಳಗಿಸು. ರಾಜಗುರುಗಳ ಬ್ರಹ್ಮತೇಜಸ್ಸು, ಆತ್ಮಶಕ್ತಿಯನ್ನು ಅರಿತು ಗೌರವಿಸಿ ಪೂಜಿಸು.

ಕೃಷ್ಣ: (ಕಾಲಿಗೆರಗಿ) ಗುರುದೇವ, ನಾನು ತಮ್ಮ ಕರುಣೆಯ ತೊಟ್ಟಿಲ ಕೈಗೂಸು. ಜನ್ಮವಿತ್ತ ಜನಕನೊಡನೆಯೂ ಬ್ರಹ್ಮಸ್ವರೂಪಿಗಳಾದ ನಿಮ್ಮೊಡನೆಯೂ ಹಗೆ ಸಾಧಿಸಿದೆ. ಆದರೂ ಅಪರಾಧಿಯಲ್ಲಿ ಅನುಕಂಪನ ತೋರಿಸಿ ನನ್ನಲ್ಲಿ ಮಾನವೀಯತೆಯನ್ನು ತುಂಬಿದಿರಿ. ಈ ನಿಮ್ಮ ಔದಾರ್ಯದ ಹೆದ್ದಾರಿಯೇ ನನಗೆ ಜನತಾಸೇವೆಯ ಕೈದೀವಿಗೆಯಾಗಲಿ!

ನೃಪತುಂಗ: ಧನ್ಯ! ಧನ್ಯ!

ಗುಣ: ನೃಪತುಂಗ, ಅನಿರೀಕ್ಷಿತವಾಗಿ ಅಗಮಿಸಿದ ನಿನ್ನ ಭಾಗ್ಯಲಕ್ಷ್ಮಿ ಮಮತಳನ್ನು ಆನಂದದಿಂದ ಕುಮಾರನೊಂದಿಗೆ ವಿಧಿಪ್ರಕಾರ ವಿವಾಹ ಮಾಡು.

ನೃಪತುಂಗ: ಗುರುದೇವ, ಅದರೊಂದಿಗೆ ಕುಮಾರನ ಪಟ್ಟಾಭಿಷೇಕವೂ ಜರಗಲಿ. ಮಾನವನ ಅಂತಿಮ ಕರ್ತವ್ಯದಂತೆ ದೇವಸಾನಿಧ್ಯದಲ್ಲೆ ನನ್ನ ಕೊನೆಯ ಜೀವನವನ್ನು ಕಳೆಯಬೇಕೆಂದು ಬಗೆದಿದ್ದೇನೆ.

ಕೃಷ್ಣ: ಅಪ್ಪಾಜೀ, ಇದೆಂತಹ ತ್ಯಾಗ! ನಾನು ಕರ್ನಾಟಕ ಸಿಂಹಾಸನದ ಚಾರಕನಾಗಿ ರಕ್ಷಣೆ ಮಾಡುತ್ತೇನೆ. ಸೇವಕನಾಗಿ ಸೇವೆ ಮಾಡುತ್ತೇನೆ. ಆದರೆ............

ನೃಪತುಂಗ: ಸಿಡಿದ ಸಿಡಿಲೂ ನೃಪತುಂಗನಾಡಿದ ಮಾತೂ ಮರಳಿ ಬಾರದು. ನನ್ನ ಬಯಕೆಯಂತೆ ನಿನ್ನ ಪಟ್ಟಾಭಿಷೇಕವೂ ವಿವಾಹ ಮಹೋತ್ಸವವೂ ನಡೆಯಬೇಕು: ಇದೇ ನನ್ನ ಕೊನೆಯ ನಿರ್ಧಾರ.

ಗುಣ: ಮಗಳೇ, ಮಮತಾ, ಕರ್ನಾಟ ಕೀರ್ತಿಗೆ ಕಲಶಪ್ರಾಯಳಾಗಿ ಬಂದಿರುವ ನೀನು ಕುಮಾರನ ಸಹಧರ್ಮಿಣಿಯಾಗಿ, ಪ್ರಜಾಜನರಿಗೆ ಮಾತೆಯಾಗಿ, ವಿರೂಪಾಕ್ಷನ ಅನುಗ್ರಹಕ್ಕೆ ಪಾತ್ರಳಾಗಿ ಚಿರಂಜೀವಿಯಾಗು!

(ಇಬ್ಬರೂ ರಾಜಗುರುಗಳಿಗೂ ಚಕ್ರವರ್ತಿ ಮತ್ತು ಮಂತ್ರಿವರ್ಯರಿಗೂ ನಮಸ್ಕರಿಸುವರು. ಹಾಗೆಯೇ ನೃಪತುಂಗನು ರಾಜಮುಕುಟವನ್ನು ಕೆಳಗಿಟ್ಟು ಗುರುವರ್ಯರಿಗೆ ನಮಸ್ಕರಿಸುತ್ತಿದ್ದಂತೆಯೇ ಪರದೆ ಇಳಿಯುವುದು).

(ಮಂಗಳ)

ಒಂದಾಣೆ ಮಾಲೆಯಲ್ಲಿ
ಈ ವರೆಗೆ ಪ್ರಕಟವಾದ
ನಲ್ವತ್ತನಾಲ್ಕು ಏಕಾಂಕ ನಾಟಕಗಳು

ಪ್ರತಿಯೊಂದಕ್ಕೆ ಒಂದಾಣೆ. **ಪುಟಗಳು: 16 + 4.**

೧	ನಾರೀಶ್ವರರು (ಪ್ರಹಸನ)	ಕುಡ್ಪಿ ವಾಸುದೇವ ಶೆಣೈ.
೨	ಬಾಬಿಗೆ ಬಾಸಿಂಗ ,,	,, ,, ,,
೩	ಸತ್ಯವಂತ ಬಾಬಿ ,,	,, ,, ,,
೪	ಮರ್ಜಿ ,,	ದಿ। ಎಮ್. ಎನ್. ಕಾಮತ್.
೫	ಸತೀ ಸಾವಿತ್ರಿ (ಪೌರಾಣಿಕ)	ಶ್ರೀ। ಪಿ. ವೆಂಕಟ್ರಮಣ ಭಟ್ಟ.
೬	ಅಕಾಂಡ ತಾಂಡವ (ರೇಡಿಯೊನಾಟಕ)	ಶ್ರೀ। ಬಿ. ದಾಮೋದರ ಬಾಳಿಗ, ಬಿ. ಎ.
೭	ಮೀರಾಬಾಯಿ (ಐತಿಹಾಸಿಕ)	ಶ್ರೀ। ಸಂ. ಜ. ರಾವ್.
೮	ಚುಟ್ಟಿ ಬಿಟ್ಟಿ ದಿಟ್ಟಿ (ಪ್ರಹಸನ)	ಡಾ। ಎಸ್. ಪಿ ಭಟ್.
೯	ಜರಾಸಂಧ ವಧೆ (ಪೌರಾಣಿಕ)	ಶ್ರೀ। ಎ. ವಿ. ಮಯ್ಯ.
೧೦	ಸತ್ಯಹರಿಶ್ಚಂದ್ರ (ಪೌರಾಣಿಕ)	ಶ್ರೀ। ಪಿ. ವೆಂಕಟ್ರಮಣ ಭಟ್ಟ.
೧೧	ಮಾಯಾಮೃಗ (,,)	ಶ್ರೀ। ಎ. ವಿ. ಮಯ್ಯ.
೧೨	ಸತೀವೃಂದಾ (,,)	ಶ್ರೀ। ಕೆ. ಸುಭಾಷಚಂದ್ರ ಶೆಣೈ.
೧೩	ಗೌತಮನ ಗೃಹತ್ಯಾಗ, ಸಿದ್ಧಾರ್ಥನ ಕಾರುಣ್ಯ	ಶ್ರೀ। ಎಲ್. ಎಸ್. ನಾಯಕ.
೧೪	ಪುನರುಜ್ಜೀವನ (ಸಾಮಾಜಿಕ)	ಶ್ರೀ। ಗೋವಿಂದ ಭಟ್ಟ.
೧೫	ಸ್ವಾತಂತ್ರ್ಯ (,,)	ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೧೬	ಭಕ್ತಕುಚೇಲ (ಪೌರಾಣಿಕ)	ಶ್ರೀ। ಅಂಬಾತನಯ.
೧೭	ಮದ್ವೆ ಅವಾಂತರ (ಪ್ರಹಸನ)	ಅಷ್ಟಾವಕ್ರ.
೧೮	ಗ್ರಾಮಸ್ವಾತಂತ್ರ್ಯ ,,	ಶ್ರೀ। ಎ. ವಿ. ಮಯ್ಯ.
೧೯	ಭಕ್ತ ಧ್ರುವ (ಪೌರಾಣಿಕ)	ಶ್ರೀ। ಸುಬ್ರಾಯ.
೨೦	ಬೇಡನ ಮಗಳು ,,	ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೨೧	ಪುರಂದರದಾಸರು (ಐತಿಹಾಸಿಕ)	ಬಿ. ಪದ್ಮನಾಭ ಸೋಮಯಾಜಿ.

೨೨ ವೀರಾಗ್ರಣಿ ಕರ್ಣ (ಪೌರಾಣಿಕ) ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೨೩ ಕುಶ-ಲವ ,, ಶ್ರೀ। ಬಿ. ಈಶ್ವರಯ್ಯ.
೨೪ ಅಕ್ಷಯಪಾತ್ರೆ (ಸಾಮಾಜಿಕ) ಶ್ರೀ। ಟಿ. ಚಂದ್ರರಾಜ ಸೆಟ್ಟಿ
೨೫ ವೈರಾಗ್ಯನಿಧಿ (ತರಂಗರೂಪಕ) ಶ್ರೀ। ಕೆ. ಎಸ್. ಶರ್ಮ, ವಿದ್ವಾನ್.
೨೬ ಭರತನ ಬಂಧುಪ್ರೇಮ(ಪೌರಾಣಿಕ) ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೨೭ ಮಹಾತ್ಮಾ ಉದಂಕ (,,) ಶ್ರೀ। ಮಣಿಲ 'ಶಿವಶಂಕರ', ಪುಣಚಾ.
೨೮ ಭಕ್ತ ಪ್ರಹ್ಲಾದ (,,) ಶ್ರೀ। ಎ. ವಿ. ಮಯ್ಯ.
೨೯ ಅಭಿಮನ್ಯು ,, ಶ್ರೀ। ಬಿ. ಈಶ್ವರಯ್ಯ.
೩೦ ವಿಷಬೀಜ ,, ಶ್ರೀ। ಕೆ. ಗೋವಿಂದ ಭಟ್ಟ.
೩೧ ಬಲಿ ಬಂಧನ ,, ಶ್ರೀ। ಎಸ್. ತಿರುಮಲೇಶ್ವರ ಭಟ್.
೩೨ ಶಕುಂತಲಾ ,, ಶ್ರೀ। ಬಿ. ಈಶ್ವರಯ್ಯ.
೩೩ ರುಕ್ಮಾಂಗದ ,, ಶ್ರೀ। ಅಂಬಾತನಯ, ಮುದ್ರಾಡಿ.
೩೪ ಸತ್ಯಭಾಮಾ ಗರ್ವಭಂಗ ,, ಶ್ರೀ। ಸಿ. ಗೋಪಾಲಕೃಷ್ಣಾಚಾರ್ಯ.
೩೫ ಶರಸೇತು ,, ಶ್ರೀ। ನಾರಾಯಣ.
೩೬ ದೀಪಾವಳಿ (ಸಾಮಾಜಿಕ) ದಿ। ಕುಡ್ಪಿ ಚಂದ್ರಕಾಂತ ಶೆಣೈ.
೩೭ ಶಂಭುಕವಧೆ (ಪೌರಾಣಿಕ) ಶ್ರೀ। ವೀ. ಬೀ. ಮಧುರಂ.
೩೮ ರಾಜಾ ಭರ್ತೃಹರಿ ,, 'ರಸಿಕ', ಪುತ್ತಿಗೆ.
೩೯ ಕಶಶಯ್ಯ (ರೇಡಿಯೊ) ,, ಶ್ರೀ। ಬಿ. ವಿ. ಶೆಣೈ.
೪೦ ಕನಕದಾಸರು (ಐತಿಹಾಸಿಕ) ಶ್ರೀ। ಬಿ. ಪದ್ಮನಾಭ ಸೋಮಯಾಜಿ.
೪೧ ರಾಮರಾಜ್ಯದ ಮಡಿವಾಳ (ಪೌರಾಣಿಕ) ಶ್ರೀ। ಡಿ. ಮಹಾಲಿಂಗ ಭಟ್ಟ.
೪೨ ಭಸ್ಮಾಸುರ ಮೋಹಿನಿ ,, ಶ್ರೀ। ಸಿ. ಗೋಪಾಲಕೃಷ್ಣಾಚಾರ್ಯ.
೪೩ ಗೋಪಾಲನ ಸ್ವಾಮ್ಯ ಶ್ರೀ। ಪಡಾರು ಮಹಾಬಲೇಶ್ವರ ಭಟ್ಟ.
೪೪ ನರವೀರ ನೃಪತುಂಗ ಶ್ರೀ। ಉಡುಪಿ ಶ್ರೀನಿವಾಸರಾವ್.

ಒಂದಾಣೆ ಮಾಲೆ, ಪ್ರಭಾತ ಆಫೀಸು,
ರಥಬೀದಿ, ಮಂಗಳೂರು-೧.

Edited, Printed & Published by K. V. Shenoy
at the Prabhat Printers, Ltd., Mangalore.